# ಶಿಕ್ಷಣದ ಹೆಸರಿನಲ್ಲಿ ಮಕ್ಕಳಿಗೇಕೆ ಚಿತ್ರಹಿಂಸೆ?

ಭವಿಷ್ಯದ ಸತ್ಪ್ರಜೆಗಳಾಗಿ ಆತ್ಮವಿಶ್ವಾಸದಿಂದ ಜೀವನ ನಡೆಸಬೇಕಿರುವ ಇಂದಿನ ಮಕ್ಕಳಿಗೆ ಶಿಕ್ಷಣವೆಂಬ ಹೆಸರಿನ ಭೂತವೊಂದನ್ನು ಸೃಷ್ಟಿಮಾಡಿದ್ದಾರೆ ಇಲ್ಲಿನ ಶಿಕ್ಷಣವೇತ್ತರು, ಸರ್ವಜ್ಞರಾದ ರಾಜಕಾರಣಿಗಳು. ಕತ್ತೆಯೂ ಹೊರಲಾರದ ಪುಸ್ತಕದ ಚೀಲವೆಂಬ ಬೆಟ್ಟವನ್ನೆ ಎತ್ತಿ ತೂರಾಡುತ್ತಾ ಹೋಗುವ ಈ ಪುಟ್ಟಮಕ್ಕಳ ಗೋಳು ಇಲ್ಲಿ ಯಾರ ಮನಸ್ಸನ್ನೂ ಕಲಕುತ್ತಿಲ್ಲವೇ? ಖಾಸಗಿ ಶಾಲೆಗಳ ಪ್ರಭೃತಿಗಳಂತೂ ತಮ್ಮ ಹಿರಿಮೆ, ಗರಿಮೆಗಳನ್ನು ಸಾಬೀತುಮಾಡಿ ತೋರಿಸಲು ಮಕ್ಕಳ ಪುಟ್ಟ ಗಂಟಲಿನಲ್ಲಿ ಇಳಿಯಲಾರದ ವಿವಿಧ ಖಾಸಗಿ ಪಠ್ಯಪುಸ್ತಕಗಳ ಬೃಹತ್ ಕಡುಬನ್ನೇ ತುರುಕಬಯಸುತ್ತಿವೆ. ಗತ್ಯಂತರವಿಲ್ಲದೆ ತಂದೆ, ತಾಯಿ ಈ ಕಟುಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಬೇಕಾಗಿರುವುದು ಎಂತಹ ವಿಪರ್ಯಾಸ? ಇತ್ತೀಚೆಗೆ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಎಂತಹವರನ್ನೂ ದಿಗ್ಭ್ರಮೆಗೊಳಿಸುವಂತಹದು. ಮಕ್ಕಳ ಗೋಳನ್ನು ನೋಡಲಾರದ ತಾಯಿ ಶಾಲೆಯ ಮುಖ್ಯಸ್ಥರೊಡನೆ ವಾದ ಮಾಡಬೇಕಾಗಿಬಂದುದು ಅತ್ಯಂತ ಸಹಜ. ಅದನ್ನು ಸಮರ್ಥಿಸಲಾರದೆ ಸೋತ ಮಕ್ಕಳ ತಂದೆ ತನ್ನ ಹೆಂಡತಿ-ಮಕ್ಕಳನ್ನು ಈ ಕಟುಕರಿಗೆ ಬಲಿ ಮಾಡಲು ಕಾರಣವಾಗಿದೆ.

ಒಂದು ತರಗತಿಯಲ್ಲಿ ಕನಿಷ್ಠ 100 ಮಕ್ಕಳಿಂದ ಹಿಡಿದು ಬೇಕೆನಿಸಿದಷ್ಟು ಮಕ್ಕಳನ್ನು ಕುರಿಗಳಂತೆ ತುಂಬಿ ಬಡಪಾಯಿ ಶಿಕ್ಷಕರಿಂದ ವಿದ್ಯೆ ಕಲಿಸುವ ಏರ್ಪಾಟು ಮಾಡಿರುವ ಈ ಎಲ್ಲ ಶಿಕ್ಷಣ ಸಂಸ್ಥೆಗಳು ಮಕ್ಕಳನ್ನು ಚಿತ್ರಹಿಂಸೆಗೆ ಗುರಿಮಾಡಿ, ಕಲಿಯುವ ಉತ್ಸಾಹವನ್ನೇ ಹಾಳುಮಾಡಿಬಿಡುತ್ತಿವೆ. ಕಲ್ಪಿತ ಪುರಾಣಗಳ ಅಥವಾ ಕಲ್ಪಿತ ಕಾರ್ಟೂನ್ ಚಿತ್ರಗಳ ಸೂಪರ್‌ಮ್ಯಾನ್ ಸಹ ನೂರಕ್ಕೂ ಅಧಿಕ ಮಕ್ಕಳನ್ನು ನಿಯಂತ್ರಿಸಿ, ಪ್ರತಿಯೊಂದು ಮಗುವಿಗೂ ಗಮನವಿತ್ತು, ಶಕ್ತಿ-ಆಸಕ್ತಿಗಳನ್ನು ಗಮನಿಸಿ ಕಲಿಸಲಾರ. ಬರೀ ಕಟ್ಟಡಗಳ ಕಗ್ಗಾಡಾಗುತ್ತಿರುವ ಬೆಂಗಳೂರಿನಂತಹ ಪಟ್ಟಣಗಳಲ್ಲಿ ಮಕ್ಕಳಿಗೆ ಆಡಲು, ಓಡಲು ಕ್ರೀಡಾಪ್ರದೇಶವೇ ಇಲ್ಲವಾಗಿದೆ. ಕಿಷ್ಕಿಂದೆಯ ರೀತಿಯ ಶಾಲಾ ಕಟ್ಟಡಗಳೊಳಗೆ ವಸ್ತುಗಳನ್ನು ಇರುಕಿ ತುಂಬುವ ರೀತಿ ಕೋಮಲ ಹಸುಳೆಗಳನ್ನು ತುಂಬಿ, ಶಿಕ್ಷಣವೆಂಬ ಹೆಸರಿನ ರಾಕ್ಷಸ ನರ್ತನ ನಡೆಯುತ್ತಿದೆ. ಈ ಗೋಳನ್ನು ಕೊನೆಗಾಣಿಸಬಲ್ಲ ಸಾಮರ್ಥ್ಯವಿರುವ ಯಾವ ವ್ಯಕ್ತಿಯೂ ಕಾಣದಾಗಿದ್ದಾನೆ. ಮಾರಲ್ಸ್, ಜನರಲ್ ನಾಲೆಡ್ಜ್, ಹಿಂದಿಗಳೆಂಬ ಬೃಹತ್ ಸಂಪುಟಗಳನ್ನು ಕಂಠಪಾಠ ಮಾಡಿಸಿ, ಈ ಶಿಕ್ಷಣ ಸಂಸ್ಥೆಗಳು ಯಾವ ಪುರುಷಾರ್ಥವನ್ನು ಸಾಧಿಸುತ್ತಿವೆ? ಮಕ್ಕಳಿಗೆ ಅಕ್ಷರಗಳನ್ನು ಸರಿಯಾಗಿ ಗುರುತಿಸಿ, ಓದುವ, ಬರೆಯುವ ಸಾಮರ್ಥ್ಯ ರೂಢಿಸುವತ್ತ ಗಮನಹರಿಸದೆ, ಹಲವಾರು ವಿಷಯಗಳ ಹೊರೆ ಹೊರಿಸಿ ಆಸಕ್ತಿಯನ್ನೇ ಮುರುಟಿಹಾಕುತ್ತಿದ್ದಾರೆ. ಓದಲು, ಬರೆಯಲು ಕಲಿತ ಮಗು ತಾನೇ ತಿಳಿಯಬೇಕೆಂಬ ಹಂಬಲ ಮೂಡಿದರೆ ಓದದೆ ಉಳಿಯಲಾರದು.

ಬರೀ ರಂಜನೆ, ಮನರಂಜನೆಗೆ ಮಾತ್ರವೇ ಪೈಪೋಟಿ ನಡೆಸುತ್ತಿರುವ ಟಿ.ವಿ. ಮಾಧ್ಯಮ ಮಕ್ಕಳ ಆಸಕ್ತಿ ಕೆರಳಿಸುವ ಶಿಕ್ಷಣಕ್ಕೆ ಪೂರಕವಾಗುವ ಯಾವ ಕಾರ್ಯಕ್ರಮಗಳಿಗೂ ಗಮನಹರಿಸಿಲ್ಲ. ಡಿಸ್ಕವರಿ ಚ್ಯಾನಲ್ ರೀತಿಯ ಕಾರ್ಯಕ್ರಮಗಳನ್ನು ಪ್ರತಿದಿನ ಸಂಜೆ 6 ರಿಂದ 7.30ರವರೆಗೆ ತಪ್ಪದೆ ಪ್ರಸಾರ ಮಾಡುವ ಏರ್ಪಾಟು ಮಾಡುವುದನ್ನು ಟಿ.ವಿ. ನಿಲಯಗಳಿಗೆ ನಿಗದಿಗೊಳಿಸುವುದು ಅಗತ್ಯ. ಶನಿವಾರ, ಭಾನುವಾರಗಳಂದು ಮೂರು ಗಂಟೆಗಳ ಉತ್ತಮ ಶಿಕ್ಷಣ ಕಾರ್ಯಕ್ರಮಗಳನ್ನು ತಪ್ಪದೆ ಪ್ರಸಾರ ಮಾಡುವುದು ಕಡ್ಡಾಯ ಮಾಡಬೇಕು. ಅಂತಾಕ್ಷರಿ, ಚಿತ್ರಗೀತೆಗಳು, ಸಿನಿಮಾ, ಧಾರಾವಾಹಿ ಕಾರ್ಯಕ್ರಮಗಳಷ್ಟೆ ಟಿ.ವಿ. ನಿಲಯಗಳ ಪ್ರಮುಖ ಪ್ರಸಾರಗಳಾಗಿರುವುದು ದುರಂತ. ಬುದ್ಧಿವಂತ ಜನಾಂಗವನ್ನು ರೂಪಿಸುವ ಸಾಮರ್ಥ್ಯ ಪಡೆದ ಟಿ.ವಿ. ಮಾಧ್ಯಮದ ನೈಜ ಸಾಮರ್ಥ್ಯ ಪೋಲಾಗುತ್ತಿರುವುದು ಅತ್ಯಂತ ಖೇದದ ಸಂಗತಿ.

ಅದೇ ರೀತಿ ಮಾನವನ ಸರ್ವ ಜ್ಞಾನಭಂಡಾರವನ್ನು ಕಂಪ್ಯೂಟರ್ ಮೌಸ್‌ನ ಒಂದು ಕ್ಲಿಕ್ಕಿಗೆ, ಬೆರಳ ತುದಿಯ ಬುಡಕ್ಕೆ ಇಂಟರ್‌ನೆಟ್ ಎಂಬ ಮಾಯಾಜಾಲ ಒದಗಿಸಿಕೊಡುವ ಸಾಮರ್ಥ್ಯ ಪಡೆದಿದೆ. ಇದರ ಅನುಕೂಲವನ್ನು ಒದಗಿಸುವ ಎಲ್ಲ ಏರ್ಪಾಟುಗಳು, ಗ್ರಂಥಾಲಯಗಳು, ಶಾಲೆ, ಕಾಲೇಜು ಮುಂತಾದವುಗಳ ಮೂಲಕ ಮಕ್ಕಳ ಕೈಗೆಟುಕುವಂತೆ ಮಾಡಬೇಕಾದುದೂ ನಮ್ಮ, ನಿಮ್ಮೆಲ್ಲರ ಹಾಗೂ ಸರಕಾರದ ಕರ್ತವ್ಯವಾಗಬೇಕಿದೆ. ಅದಕ್ಕೆ ಸೂಕ್ತವಾದ ತರಬೇತಿ, ನೆಟ್‌ವರ್ಕ್‌ಗಳ ಏರ್ಪಾಟು ಎಲ್ಲವೂ ಅಗತ್ಯ. ಕಲಿಕೆ ರಂಜನೆಯಷ್ಟೇ ಆಸಕ್ತಿದಾಯಕವಾಗಿ ಮಾಡುವ ಏರ್ಪಾಟು ಇಂದು ಇಲ್ಲಿ ಪ್ರಮುಖವಾಗಿ ನಡೆಯಬೇಕಿದೆ. ಆಗ ಮಾತ್ರ ಮಕ್ಕಳು ಜ್ಞಾನದಾಹಿಗಳು, ವಿಜ್ಞಾನದಾಹಿಗಳು, ಪರಿಪೂರ್ಣ ವ್ಯಕ್ತಿತ್ವವುಳ್ಳವರೂ ಆಗಿ ಬೆಳೆಯಲು ಸಾಧ್ಯವಾಗುವುದು.

ಬಿ.ಬಿ. ಚಿನ್ಮಯಕುಮಾರ್